# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 276 ಜಿಪಅ 14

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ.22.9.2014.

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
ಬೆಂಗಳೂರು.

ವಿಧಾನ ಪರಿಷತ್ ಪ್ರಶ್ನೆ ಅತಿ ತುರ್ತು

ಫ್ಯಾಕ್ಸ್.

ಇವರಿಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ಬಾಗಲಕೋಟೆ/ಬೆಳಗಾಂ/ಬಳ್ಳಾರಿ/ಬೀದರ್
ಚಿತ್ರದುರ್ಗ/ದಾರವಾಡ/ಗುಲ್ಬರ್ಗಾ/ ಕೋಲಾರ/ಮಂಡ್ಯ/
ರಾಯಚೂರು/ಉಡುಪಿ/ಚಕ್ಕಬಳ್ಳಾಪುರ/ಕಾರವಾರ/
ಯಾದಗಿರಿ/.

ಮಾನ್ಯರೇ,

ವಿಷಯ: – ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ವೀರಯ್ಯ ಇವರ ಪ್ರಶ್ನೆ ಸಂಖ್ಯೆ:612 ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ:–ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:05.07.2014 ಮತ್ತು 22.7.2014

(((s)))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನೆ ಸಂಖ್ಯೆ: 612 ರ ಪ್ರತಿಯನ್ನು ಲಗತ್ತಿಸಿ ಕಳುಹಿಸಿ ಸದರಿ ಪ್ರಶ್ನೆಯಲ್ಲಿರುವ (ಅ) (ಆ)(ಈ) (ಇ) (ಉ) ಮತ್ತು (ಊ) ರಲ್ಲಿನ ಅಂಶಗಳಿಗೆ ಅಂಶವಾರು ಉತ್ತರವನ್ನು ಸಿದ್ಧಪಡಿಸಿ, ಮರುಫ್ಯಾಕ್ಸ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸುವಂತೆ ಉಲ್ಲೇಖಿತ ಪತ್ರಗಳಲ್ಲಿ ಕೋರಲಾಗಿತ್ತು. ಆದರೆ, ತಮ್ಮ ಜಿಲ್ಲಾ ಪಂಚಾಯತ್ ಗಳಿಂದ ಮೇಲ್ಕಂಡ ಪ್ರಶ್ನೆಗೆ ಇಂದಿನವರೆಗೂ ಉತ್ತರ ಸ್ವೀಕೃತವಾಗಿರುವುದಿಲ್ಲ, ಸದರಿ ಪ್ರಶ್ನೆಗೆ ಕ್ರೋಢೀಕರಿಸಿದ ಉತ್ತರವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ನೀಡಬೇಕಾಗಿರುವುದರಿಂದ ವಿಳಂಬಕ್ಕೆ ಅವಕಾಶವಿಲ್ಲದೆ ಒಂದು ವಾರದೊಳಗೆ ಉತ್ತರವನ್ನು ಸಿದ್ಧಪಡಿಸಿ, ಮರು ಫ್ಯಾಕ್ಸ್‌ನಲ್ಲಿ ಸರ್ಕಾರಕ್ಕೆ ಒದಗಿಸುವಂತೆ ಮತ್ತೊಮ್ಮೆ ಕೋರಲು ನಿರ್ದೇಶಿತನಾಗಿದ್ದೇನೆ.

ಮಾಹಿತಿಗಾಗಿ ಪ್ರಶ್ನೆ ಸಂಖ್ಯೆ: 612 ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ, ಕಳುಹಿಸಿದೆ,

ತಮ್ಮ ನಂಬುಗೆಯ

(ಸಿದ್ದೇಶ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿ:– ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾ ನಿಯಮಗಳು–1) ಇವರ ಮಾಹಿತಿಗಾಗಿ ಕಳುಹಿಸದೆ.

(2)

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 60 ಸೇಸ್ಥಅ 2014

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:27.6.2014

**ಜರೂರು**

## ಅನಧಿಕೃತ ಟಿಪ್ಪಣಿ

ವಿಷಯ : ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್ ವೀರಯ್ಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 612ಕ್ಕೆ ಉತ್ತರಿಸುವ ಬಗ್ಗೆ.

***

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್. ವೀರಯ್ಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 612 ಈ ಕೆಳಕಂಡಂತಿದೆ:

ಅ) 1984ರ ನಂತರ ನೇಮಕಗೊಂಡು ವಿವಿಧ ಇಲಾಖೆ ಮತ್ತು ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ ಮಂಡಳಿವಾರು ವಿವರ ನೀಡುವುದು)

ಆ) ಈ ಪೈಕಿ ದಿನಾಂಕ: 2006ರ ಏಪ್ರಿಲ್ 10ಕ್ಕೆ, 10 ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ ಮಂಡಳಿವಾರು ವಿವರ ನೀಡುವುದು);

ಇ) ದಿನಾಂಕ: 2013ರ ಫೆಬ್ರವರಿ 15ಕ್ಕೆ ಮತ್ತು ನಂತರ ಇದುವರೆವಿಗೂ 10 ವರ್ಷ ಪೂರ್ಣಗೊಳಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು)

ಈ) ದೀರ್ಘಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಮತ್ತು ಮರಣ ಹೊಂದಿದವರ ನೌಕರರಿಗೆ ಯಾವುದಾದರು ಸಾಮಾಜಿಕ ಮತ್ತು ಆರ್ಥಿಕ ಸವಲತ್ತುಗಳನ್ನು ಸರ್ಕಾರದಿಂದ ಒದಗಿಸಲಾಗಿದೆಯೇ;

ಉ) ದಿನಾಂಕ: 2006ರ ಏಪ್ರಿಲ್, 10ಕ್ಕೆ 10 ವರ್ಷ ಪೂರ್ಣಗೊಳಿಸಿ ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು)

ಊ) ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದ ನಂತರ (ದಿನಾಂಕ: 2006ರ ಏಪ್ರಿಲ್ 10) ಖಾಯಂಗೊಂಡ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ನಿಗಮ, ಮಂಡಳಿವಾರು ವಿವರ ನೀಡುವುದು)

...2

ಋ) ಪ್ರತಿಯೊಂದು ಇಲಾಖೆಯ ಪ್ರಗತಿ ಪರಿಶೀಲನಾ ಮಾಡುವ ಮುಖ್ಯಮಂತ್ರಿಗಳು ತಮ್ಮ ಅಧೀನಕ್ಕೆ ಒಳಪಡುವ ಇಲಾಖೆಯ ವಿಷಯವಾದ "ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ -2013ನ್ನು ಕಳೆದ 16 ತಿಂಗಳಿನಿಂದ ಜಾರಿಗೆ ತರದೇ ತಮ್ಮಲ್ಲೇ ಉಳಿಸಿಕೊಂಡಿರುವುದು ಸಮಂಜಸವೇ;

ಎ) ಹಾಗಿದ್ದಲ್ಲಿ, ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ನಿಯಮ - 2013ನ್ನು ಶೀಘ್ರವಾಗಿ ಜಾರಿಗೊಳಿಸಲು ಕ್ರಮ ವಹಿಸಲಾಗುವುದೇ?

ಮೇಲ್ಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 03/07/2014ರಂದು ಸದನದಲ್ಲಿ ಉತ್ತರಿಸಬೇಕಾಗಿದೆ. ಆದುದರಿಂದ ಸದರಿ ಪ್ರಶ್ನೆಗಳಲ್ಲಿನ (ಅ), (ಆ), (ಇ), (ಈ) (ಉ) ಮತ್ತು (ಊ)ಪ್ರಶ್ನೆಗೆ ಸಂಬಂಧಿಸಿದಂತೆ ಆಡಳಿತ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರದ ಎಲ್ಲಾ ಇಲಾಖೆಗಳಿಂದ ಮತ್ತು ನಿಗಮ ಮಂಡಳಿಗಳಿಂದ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿದ ಉತ್ತರಗಳನ್ನು (ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ) ದಿನಾಂಕ: 30/06/2014ರೊಳಗೆ ತಪ್ಪದೇ ಸಿಆಸುಇ(ಸೇವಾ ನಿಯಮಗಳು)ಗೆ ಒದಗಿಸಬೇಕೆಂದು ಕೋರಲಾಗಿದೆ.

(ಡಾ|| ಮಂಗಳ ಜಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಯವರು /ಕಾರ್ಯದರ್ಶಿಯವರು
2. ಸರ್ಕಾರದ ಜಂಟಿ/ಉಪ ಕಾರ್ಯದರ್ಶಿ, ಸಿಆಸು ಇಲಾಖೆ (ಸೇವೆಗಳು/ಶಿಷ್ಟಾಚಾರ / ಆಡಳಿತ/ಸಿಬ್ಬಂದಿ).